# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/09/2016-17

ದಿನಾಂಕ:21.10.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಅಂಗಡಿ ಕೊಟ್ರಮ್ಮ ಗಂಡ ಲೇಟ್ ಅಂಗಡಿ ಹಾಲಪ್ಪ<br>ಗ್ರಾಮ:-ವರ್ಲಹಳ್ಳಿ ತಾ:-ಹೆಚ್.ಬಿ.ಹಳ್ಳಿ | 1.ಅಂಗಡಿ ಚನ್ನಪ್ಪ ತಂದೆ ಚನ್ನಬಸಪ್ಪ<br>2.ಎ.ಗುರುಬಸಪ್ಪ ತಂದೆ ಚನ್ನಪ್ಪ<br>ಗ್ರಾಮ:-ವರ್ಲಹಳ್ಳಿ ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಪಿ.ಬಿ.ಧರ್ಮನಗೌಡ, ವಕೀಲರು, ಹ.ಬೊ.ಹಳ್ಳಿ] |

**ವಿವಾದಿತಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ವರ್ಲಹಳ್ಳಿ | 15/ಬಿ/3 | 4-00 | ಖುಷ್ಕಿ |
| 2. | " | " | 221/ಬಿ | 1-15 | " |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ವರ್ಲಹಳ್ಳಿ ಗ್ರಾಮದ ನಿವಾಸಿಯಾದ ಅಂಗಡಿ ಕೊಟ್ರಮ್ಮ ಗಂಡ ಲೇಟ್ ಅಂಗಡಿ ಹಾಲಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:13.06.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:22.06.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:04.07.2016 ರಂದು ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.126/15-16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯರಿಗೆ ದಿನಾಂಕ:11.08.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:11.08.2016 ರಿಂದ 20.10.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಹೇಳುವಂತೆ; ಪ್ರಕರಣದಲ್ಲಿ ಸ.ನಂ.15/ಬಿ/3 ವಿಸ್ತೀರ್ಣ 4-00 ಎಕರೆ ಜಮೀನಿಗೆ ಈಗಾಗಲೇ ಉಪತಹಶೀಲ್ದಾರರ ನ್ಯಾಯಾಲಯ, ಕೊಗಳಿಯಲ್ಲಿ ಆ.ಸಂಖ್ಯೆ ಕಂ:ಪಹಣಿ:ವಿವಾದ:40/14-15 ದಿನಾಂಕ:29.12.2014 ರಂದು ಸದರಿ ಜಮೀನಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯ, ಹ.ಬೊ.ಹಳ್ಳಿ ಅಂತಿಮ ಆದೇಶದನ್ವಯ ಕ್ರಮ ವಹಿಸಲು ಆದೇಶಿಸಿರುತ್ತಾರೆ. ಎಂದು ನೆರಳು ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸ.ನಂ.221/ಬಿ ವಿಸ್ತೀರ್ಣ 1-15 ಎಕರೆ ಜಮೀನಿಗೆ ನನಗೆ ಯವುದೇ ಸಂಬಂಧ ಇರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಹೇಳುವಂತೆ; ಪೌತಿ ವಾರಸು ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆಯನ್ನು ನೀಡಿರುತ್ತಾರೆ.

ಪುಟ-2ಕ್ಕೆ..

ಪ್ರಕರಣದಲ್ಲಿ ದಿನಾಂಕ:22.09.2016 ರಂದು ಕರೆಯಲಾಗಿ ಉಭಯರು ಹಾಜರಾಗಿರುತ್ತಾರೆ. ತಕರಾರುದಾರರ ಪರ ಶ್ರೀ ಪಿ.ಬಿ.ಧರ್ಮನಗೌಡ, ವಕೀಲರು ಹ.ಬೊ.ಹಳ್ಳಿ ಇವರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿ, ಹೇಳುವಂತೆ; ಸದರಿ ಜಮೀನಿಗೆ ಈಗಾಗಲೇ ಮಾನ್ಯ ಸಿವಿಲ್ ನ್ಯಾಯಾಲಯ, ಹ.ಬೊ.ಹಳ್ಳಿ ಯಲ್ಲಿ ಪ್ರಕರಣ ನಡೆಯುತ್ತಿರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಸದರಿ ಒ.ಎಸ್.ಸಂಖ್ಯೆ 136/2013 ರ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಸದರಿ ಅರ್ಜಿದಾರರು ಹೇಳುವಂತೆ; ಸದರಿ ಜಮೀನು ನನ್ನ ಗಂಡನ ಹೆಸರಿಗೆ ಇದ್ದು, ಅವರ ಮರಣ ನಂತರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಅರ್ಜಿದಾರರ ವಂಶವೃಕ್ಷದಂತೆ ವಾರಸುದಾರರು ಹೇಳುವಂತೆ; ನಮ್ಮ ತಾಯಿಯವರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ವಾರಸುದಾರರು ಹಾಗೂ ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಪ್ರಕರಣದಲ್ಲಿ ಸ.ನಂ.15/ಬಿ/3 ವಿಸ್ತೀರ್ಣ 4-00 ಎಕರೆ ಜಮೀನಿಗೆ ಈಗಾಗಲೇ ಉಪತಹಶೀಲ್ದಾರರ ನ್ಯಾಯಾಲಯ, ಕೋಗಳಿಯಲ್ಲಿ ಆ.ಸಂಖ್ಯೆ ಕಂ:ಪಹಣಿ:ವಿವಾದ:40/14-15 ದಿನಾಂಕ:29.12.2014 ರಂದು ಸದರಿ ಜಮೀನಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯ, ಹ.ಬೊ.ಹಳ್ಳಿ ಅಂತಿಮ ಆದೇಶದನ್ವಯ ಕ್ರಮ ವಹಿಸಲು ಆದೇಶಿಸಿರುತ್ತಾರೆ. ಮತ್ತು ಒ.ಎಸ್.ಸಂಖ್ಯೆ 136/2013 ಪ್ರಕಾರ ಮಾನ್ಯ ಸಿವಿಲ್ ನ್ಯಾಯಾಲಯ, ಹ.ಬೊ.ಹಳ್ಳಿ ಯಲ್ಲಿ ಪ್ರಕರಣ ನಡೆಯುತ್ತಿರುವುದರಿಂದ ಸದರಿ ಗ್ರಾಮದ ಸ.ನಂ.15/ಬಿ/3 ವಿಸ್ತೀರ್ಣ 4-00 ಎಕರೆ ಜಮೀನಿಗೆ ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಸ.ನಂ.221/ಬಿ ವಿಸ್ತೀರ್ಣ 1-15 ಎಕರೆ ಜಮೀನಿಗೆ ಅರ್ಜಿದಾರರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.126/2015-16ರ ಪ್ರಕಾರ, ಪ್ರಕರಣದಲ್ಲಿ ವರ್ಲಹಳ್ಳಿ ಗ್ರಾಮದ ಸ.ನಂ.15/ಬಿ/3 ವಿಸ್ತೀರ್ಣ 4-00 ಎಕರೆ ಜಮೀನು ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಸ.ನಂ.221/ಬಿ ವಿಸ್ತೀರ್ಣ 1-15 ಎಕರೆ ಜಮೀನಿಗೆ ಅರ್ಜಿದಾರರಾದ ಅಂಗಡಿ ಕೊಟ್ರಮ್ಮ ಗಂಡ ಲೇಟ್ ಅಂಗಡಿ ಹಾಲಪ್ಪ ಇವರ ಹೆಸರಿಗೆ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:21.10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

21/10/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

8/11/16

A.ಚಿನ್ನಪ್ಪ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.